ಮನೆ ತಂಪಾಗಿತ್ತು. ಆದರೆ ಒಂದೇ. ಚಳಿಗಾಲದಲ್ಲಿ ಮಾತ್ರವಲ್ಲ, ಉಳಿದ ಸಮಯದಲ್ಲೂ ಅದರ ಎಲೆಗಳು ಉದುರಿ ಸುತ್ತಮುತ್ತ ಬೀಳುತ್ತಿತ್ತು. ಅದನ್ನು ತೆಗೆಯುವುದೇ ಒಂದು ಕೆಲಸ. ಮೂಸಬ್ಬನೇನೂ ಅದನ್ನು ತೆಗೆದನೆಂದಲ್ಲ. ಅವನ ಹೆಂಡತಿ ಕುಂಞಿಲಿಯಮ್ಮ ಬಿಡುವಿನ ಹೊತ್ತಿನಲ್ಲಿ ಅದನ್ನೆಲ್ಲ ಗುಡಿಸಿ ತರಗೆಲೆಗಳನ್ನೂ ಪುರುಳೆಗಳನ್ನೂ ಬುಟ್ಟಿಯಲ್ಲಿ ತುಂಬಿ ಸ್ನಾನದ ಒಲೆಗೆ ಬಳಸುತ್ತಿದ್ದುದರಿಂದ ಅಲ್ಲೆಲ್ಲ ಯಾವಾಗಲೂ ಸ್ವಚ್ಛವಾಗಿರುತ್ತಿತ್ತು. ಹಾಗೆ ಗುಡಿಸುವಾಗ ಮರದ ಹಿಂದೆ ಬಿದ್ದಿದ್ದ ಸಿಗರೇಟಿನ ತುಂಡುಗಳನ್ನೂ ಚಾದ ಪೇಪರ್ ಗ್ಲಾಸುಗಳನ್ನೂ ಕಂಡು ಅವಳು ಸಿಡಿಮಿಡಿಗೊಳ್ಳುವುದುಂಟು. ಈ ಮಕ್ಕಳಿಗೆ ಏನಾಗಿದೆ, ಇವರ ಅಪ್ಪ ಅಮ್ಮ ಇವರಿಗೆ ಸ್ವಚ್ಛವಾಗಿಡುವುದನ್ನು ಕಲಿಸಲಿಲ್ಲವೇ ಎನ್ನುತ್ತಾ ಆಕೆ ಗುಡಿಸುತ್ತಾ ಇರುವುದನ್ನು ಯಾವಾಗಲೂ ಕಾಣಬಹುದು. ಸಿಗರೇಟು ಸೇದಲು ಬಂದ ಮಕ್ಕಳು ಮಾತ್ರ ಮುಸಿಮುಸಿ ನಗುವುದಿತ್ತು. ಮೂಸಬ್ಬ ಅದರ ಬಗ್ಗೆ ಯೋಚಿಸಿದವನೇ ಅಲ್ಲ. ಈ ದೇಶದಲ್ಲಿ ಮನೆಗಳೆಲ್ಲ ಸರಿಯಾಗಿ ನಡೆಯುವುದು ಹೆಂಗಸರಿಂದಲೇ ಅನ್ನುವ ಸತ್ಯ ಅವನಿಗೆ ಗೊತ್ತು.

ಅದು ಬಹಳ ಹಳೆಯ ಮರ. ಹಾಗಾಗಿ ವಿಶಾಲವಾಗಿ ಬೆಳೆದಿತ್ತು. ಹಳೆಯದಾದುದರಿಂದ ಅದರ ಗೆಲ್ಲುಗಳು ಆಗಾಗ ಒಣಗಿ ಬೀಳುವುದಿತ್ತು. ಸಣ್ಣ ಪುಟ್ಟ ಟೊಂಗೆಗಳು ಬಿದ್ದರೆ ಪರವಾಗಿಲ್ಲ. ಆದರೆ ಮಳೆಗಾಳಿಗೆ ಎಲ್ಲಾದರೂ ದೊಡ್ಡ ಗೆಲ್ಲೇ ಬಿದ್ದರೆ ದುಡ್ಡು ಕೊಟ್ಟು ತಂದ ಹಂಚುಗಳು ಒಡೆದು ಕೆಳಗಿದ್ದವರಿಗೂ ಪ್ರಾಣಾಪಾಯ ತಪ್ಪಿದ್ದಲ್ಲ ಎಂದು ಮೂಸಬ್ಬನಿಗೆ ಆತಂಕ. ಅವನ ಗಿರಾಕಿಗಳು ಈ ಬಗ್ಗೆ ಒಂದೆರಡು ಬಾರಿ ಹೇಳಿದ್ದಿತ್ತು, ‘ಈ ಮರ ಉರುಳಿ ಬೀಳಬಹುದಲ್ಲ ಸಾಹೇಬ್ರೇ? ಯಾವ ಧೈರ್ಯದ ಮೇಲೆ ಇಲ್ಲಿ ಇದ್ದೀರೋ? ಪಂಚಾಯತ್ ಬೋರ್ಡಿಗೆ ಒಂದು ಅರ್ಜಿ ಕೊಟ್ಟು ಅದನ್ನು ಕಡಿಸುವ ವ್ಯವಸ್ಥೆ ಯಾಕೆ ಮಾಡಬಾರದು?’ ಎಂದು. ಅದು ಅವನ ಧೈರ್ಯವನ್ನೂ ಉಡುಗಿಸಿತ್ತು. ಗಿರಾಕಿಗಳು ಹಾಗೆ ಹೇಳದಿದ್ದರೆ ಅವನು ಸೂರಿನ ಮೇಲಿನ ಗೆಲ್ಲುಗಳನ್ನು ಎಂದಾದರೊಂದು ದಿನ ಕಡಿದು ಹಾಕೇ ಬಿಡುತ್ತಿದ್ದನೋ ಏನೋ. ಆದರೆ ಸರಕಾರೀ ಮರವನ್ನು ಕಡಿಯಬೇಕಾದರೆ ಪಂಚಾಯತ್ ಬೋರ್ಡಿನ ಒಪ್ಪಿಗೆ ಬೇಕು ಎಂದು ಅವನಿಗೆ ತಿಳಿದದ್ದೇ ಆಗ. ಈ ಪಂಚಾಯತ್‌ನವರಿಗೆ ಅರ್ಜಿ ಕೊಟ್ಟು ಅವರ ಹಿಂದೆ ಅಲೆಯಬೇಕಾಯಿತಲ್ಲ ಎಂದವನು ಯೋಚನೆಗೀಡಾದ. ಯಾಕೆಂದರೆ ಪಂಚಾಯತ್ ಸದಸ್ಯರಿಗೆ ಅವನನ್ನು ಕಂಡರೆ ಆಗುವುದಿಲ್ಲ ಎಂಬ ಭಾವನೆ ಅವನಿಗೆ. ಹಿಂದೊಮ್ಮೆ ಒಬ್ಬರು ಸದಸ್ಯರು ಅವನು ಅಲ್ಲಿ ಮನೆ ಕಟ್ಟಲು ಪರವಾನಿಗೆ ಪಡೆದುಕೊಳ್ಳಲಿಲ್ಲ ಎಂದು ಕ್ಯಾತೆ ತೆಗೆದಿದ್ದರು. ಆದರೆ ಅವನನ್ನು ಅಲ್ಲಿಂದ ಎಬ್ಬಿಸುವ ಕೆಲಸ ಮಾಡಲು ಯಾರಿಗೂ ಧೈರ್ಯವಾಗಿರಲಿಲ್ಲ.

ಇದಾದ ಕೆಲವೇ ದಿನಗಳಲ್ಲಿ ಪಂಚಾಯತ್ ಬೋರ್ಡಿನವರ ಒಂದು ಸಭೆ ಇದ್ದುದರಿಂದ ಅವನು ಒಂದು ಅರ್ಜಿ ಬರೆದು ಅಂಗಿಯ ಕಿಸೆಯಲ್ಲಿಟ್ಟು ಹೋದ. ಎಲ್ಲರೂ ಉಪಸ್ಥಿತರಾದ ಮೇಲೆ ಸಭೆಯ ಕಲಾಪ ಆರಂಭವಾಯಿತು. ಮೊದಲು ಅಧ್ಯಕ್ಷರಿಂದ ವರದಿ ವಾಚನ. ಅದನ್ನು ಸ್ವೀಕರಿಸುವ ಬಗ್ಗೆ ಒಂದಷ್ಟು ಚರ್ಚೆಯೂ ಆಯಿತು. ಆ ಮೇಲೆ ಆಯವ್ಯಯ ಪಟ್ಟಿಯನ್ನು ಮಂಡಿಸಲಾಯಿತು. ಈ ಎಲ್ಲ ಕಲಾಪಗಳು ನಡೆಯುತ್ತಿರುವಾಗ ಮೂಸಬ್ಬ ತೆಪ್ಪನೆ ಕುಳಿತಿದ್ದ. ಅದಾದ ಮೇಲೆ ‘ಇತರ ವಿಷಯಗಳು’ ಎಂದು ಕಾರ್ಯದರ್ಶಿ ಪ್ರಕಟಿಸಿದರು. ಆಗ ಮೂಸಬ್ಬ ‘ನನ್ನದೊಂದು ಅರ್ಜಿ ಇದೆ’ ಎಂದು ಕೈ ಎತ್ತಿದ. ಅಧ್ಯಕ್ಷರ ಮುಖದ ಮೇಲೆ ಒಂದು ಸುಳಿನಗೆ ಮಿನುಗಿತು. ಆದರೂ ಅವರು ‘ಏನದು?’ ಎಂದು ಕೇಳಲು ಹಿಂದೆ ಬೀಳಲಿಲ್ಲ.

ಮೂಸಬ್ಬ ಎದ್ದು ನಿಂತು ಅಂಗಿಯ ಕಿಸೆಯಲ್ಲಿ ಮಡಚಿಟ್ಟ ಅರ್ಜಿಯನ್ನು ತೆಗೆದು ಬಿಡಿಸಿ